ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಯವರ ಕಛೇರಿ,
ಬೆಂಗಳೂರು ದಕ್ಷಿಣ ವಲಯ,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು,
ಬನ್ನೇರುಘಟ್ಟ ಮುಖ್ಯ ರಸ್ತೆ,
ಬೆಂಗಳೂರು-560029.

Phone No-080-29761529
Email Id- rfosouthblr@gmail.com

**No.38/Education/CC/RFO/Bng-South/2026** **Dated: 24-03-2026**

ಗೆ,

Principal,
M/s. BRS Global School,
#15/3, IAS Layout,
Kasavanahalli Main Road,
Sarjapur Road,
Bengaluru-560 035.

ಮಾನ್ಯರೇ,

ವಿಷಯ : M/s. BRS Global School, #15/3, ಐಎಎಸ್ ಲೇಔಟ್, ಕಸವನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ ರಸ್ತೆ, ಬೆಂಗಳೂರು-560 035. ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸಮಾಪನ ಪತ್ರ ನೀಡುವ ಬಗ್ಗೆ.

ಉಲ್ಲೇಖ : 1) ಸಲಹಾ ಪತ್ರ ಸಂ. 13/Education/FSR/RFO/Bng-South/2025 ದಿನಾಂಕ: 10-02-2026.
2) ನಿಮ್ಮ ಪತ್ರ ದಿನಾಂಕ: 14-02-2026.

<<<<<<<<>>>>>>>

#15/3, ಐಎಎಸ್ ಲೇಔಟ್, ಕಸವನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ ರಸ್ತೆ, ಬೆಂಗಳೂರು-560 035. ಇಲ್ಲಿ ನಿರ್ಮಿಸಿರುವ 20.20 ಮೀಟರ್ ಎತ್ತರದ ನೆಲಹಂತ ಮತ್ತು 05 ಮೇಲಂತಸ್ತುಗಳನ್ನು ಹೊಂದಿರುವ M/s. BRS Global School, ಶೈಕ್ಷಣಿಕ ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ಈ ಮೇಲಿನ ಉಲ್ಲೇಖ (1) ರಂತೆ ದಿನಾಂಕ:10-02-2026 ರಂದು ನಿಮ್ಮ ಕೋರಿಕೆಯಂತೆ ಅಗ್ನಿಶಮನ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2) ರ ನಿಮ್ಮ ಪತ್ರದಲ್ಲಿ, ಸದರಿ ಶೈಕ್ಷಣಿಕ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ ನೀಡುವಂತೆ ಕೋರಿರುವಿರಿ.

ನಿಮ್ಮ ಕೋರಿಕೆಯಂತೆ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ಸರ್ಜಾಪುರ ರಸ್ತೆ ಅಗ್ನಿಶಾಮಕ ಠಾಣೆ, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ರವರು ದಿನಾಂಕ: 13-03-2026 ರಂದು M/s. BRS Global School, ಇಲ್ಲಿ ನಿರ್ಮಿಸಿರುವ ಶೈಕ್ಷಣಿಕ ಕಟ್ಟಡವನ್ನು ಪರಿವೀಕ್ಷಣೆ ಮಾಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ, ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶೈಕ್ಷಣಿಕ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ಹಾಗೂ ಸದರಿ ಕಟ್ಟಡದಲ್ಲಿನ

ನೌಕರರು/ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತ ತರಬೇತಿ ಮಾತ್ರ ಬಾಕಿ ಇರುವುದಾಗಿ ಹಾಗೂ ಸದರಿ ಕಟ್ಟಡದ ಸಮಾಪನ ಪತ್ರ ತರುವಾಯ ಅದರಲ್ಲಿನ ಸಿಬ್ಬಂದಿಗಳಿಗೆ ಅಗ್ನಿಶಮನ ಕುರಿತು ತರಬೇತಿ ವ್ಯವಸ್ಥಿಸಲು ಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

ಆದ್ದರಿಂದ #15/3, ಐಎಎಸ್ ಲೇಔಟ್, ಕಸವನಹಳ್ಳಿ ಮುಖ್ಯ ರಸ್ತೆ, ಸರ್ಜಾಪುರ ರಸ್ತೆ, ಬೆಂಗಳೂರು-560 035. ಇಲ್ಲಿ ನಿರ್ಮಿಸಿರುವ 20.20 ಮೀಟರ್ ಎತ್ತರದ ನೆಲಹಂತ ಮತ್ತು 05 ಮೇಲಂತಸ್ತುಗಳನ್ನು ಹೊಂದಿರುವ M/s. BRS Global School, ಶೈಕ್ಷಣಿಕ **ಕಟ್ಟಡಕ್ಕೆ** ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ ಸಂ. 13/Education/FSR/RFO/Bng-South/2025 ದಿನಾಂಕ: 10-02-2026 ರಲ್ಲಿ ತಿಳಿಸಿರುವಂತೆ, ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿ ನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹಾಗೂ ನಿಮ್ಮ ಮುಚ್ಚಳಿಕೆ ಪತ್ರ ದಿನಾಂಕ:24-03-2026 ರಲ್ಲಿ ಒಪ್ಪಿರುವಂತೆ, ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಹಾಗೂ ಕಟ್ಟಡದಲ್ಲಿನ ಶೇಕಡಾ 40% ರಷ್ಟು ಸಿಬ್ಬಂದಿ/ನೌಕರರಿಗೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಬೆಂಗಳೂರಿನ ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ಸೂಕ್ತ ತರಬೇತಿಯನ್ನು 03 ತಿಂಗಳೊಳಗೆ ಪಡೆಯಲು ವ್ಯವಸ್ಥಿಸಬೇಕೆಂಬ ಷರತ್ತಿನ ಮೇಲೆ **ಸಮಾಪನ ಪತ್ರ**ವನ್ನು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನೀಡಲಾಗಿದೆ.

**ಈ ಸಮಾಪನ ಪ್ರಮಾಣ ಪತ್ರವು ದಿನಾಂಕ:-09-02-2028 ರವರೆಗೆ ಚಾಲ್ತಿಯಲ್ಲಿರುತ್ತದೆ. ತದನಂತರ ಈ ಸಮಾಪನ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.**

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಕಾನೂನಿನ್ವಯ ಸದರಿ ಕಟ್ಟಡದ ಸುತ್ತ ಬಿಟ್ಟಿರುವ ತೆರೆದ ಪ್ರದೇಶದಲ್ಲಿ ಯಾವುದೇ ಹೆಚ್ಚುವರಿ ರಚನೆಗಳನ್ನು ನಿರ್ಮಾಣ ಮಾಡಿದರೆ ಅಥವಾ ಯಾವುದೇ ರೀತಿಯ ಖಾಯಂ/ತಾತ್ಕಾಲಿಕ ಅಡಚಣೆಗಳನ್ನು ಉಂಟು ಮಾಡಿದರೆ, ಈ **ಸಮಾಪನ ಪತ್ರವು** ಅನೂರ್ಜಿತಗೊಳ್ಳುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

16/4/26

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ
ಬೆಂಗಳೂರು ದಕ್ಷಿಣ ವಲಯ
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

1) ಪ್ರತಿಯನ್ನು ಗೌರವಗಳೊಂದಿಗೆ,
ಮಾನ್ಯ ಪೋಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು,
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
2) ಜಿಲ್ಲಾ ಅಗ್ನಿಶಾಮಕ ಅಧಿಕಾರಿ,
ಸರ್ಜಾಪುರ ರಸ್ತೆ ಅಗ್ನಿಶಾಮಕ ಠಾಣೆ
ಬೆಂಗಳೂರು.

SANGEETHA GOVIND BALLAL
PRINCIPAL
BRS GLOBAL SCHOOL
Aff No. 830346, School Code: 45263
# 15/3, Kasavanahalli Road, Bangalore-560035
Email: queryk@brsglobalschool.edu.in
Phone No. 9343864556

BRS GLOBAL SCHOOL
SECRETARY